(ನಿ: ಜೈಶಂಕರ್) ಸಹೃದಯರ ಗಮನಸೆಳೆದ ವರ್ಷದ ಮತ್ತೊಂದು ಸಿನಿಮಾ.

### ಮುಖ್ಯವಾಹಿನಿಯ ಭಿನ್ನದನಿಗಳು

2024ರಲ್ಲಿ ಗಮನಸೆಳೆದ ನಾಯಕನಟರಲ್ಲಿ ವಿನಯ್ ರಾಜ್‌ಕುಮಾರ್, ವಿಜಯ್, ಗಣೇಶ್ ಹಾಗೂ ಶಿವರಾಜ್‌ಕುಮಾರ್ ಮುಖ್ಯರಾದವರು.

ನಾಯಕನಾಗಿ ನಟಿಸಿದ 'ಸಿದ್ಧಾರ್ಥ' ಸಿನಿಮಾದಿಂದ ಹಿಡಿದು ಇತ್ತೀಚಿನ 'ಪೆಪೆ'ಯವರೆಗೆ ವಿನಯ್ ನಟನೆಯ ಎಲ್ಲ ಸಿನಿಮಾಗಳು ಕಥೆಯ ಕಾರಣದಿಂದ ಸಹೃದಯರ ಗಮನಸೆಳೆದಿವೆ. ಯಶಸ್ಸಿನ ದೃಷ್ಟಿಯಿಂದ ಗಮನಸೆಳೆಯದೆ ಹೋದರೂ, ನಾಯಕನಟನೊಬ್ಬ ಹೊಸತನಕ್ಕೆ ತನ್ನನ್ನೊಡ್ಡಿಕೊಳ್ಳುವ ಪ್ರಯೋಗಗಳ ರೂಪದಲ್ಲಿ ವಿನಯ್‌ರ ಸಿನಿಮಾಗಳನ್ನು ಗಮನಿಸಬೇಕು. ಈ ವರ್ಷ ಅವರ ಅಭಿನಯದ ಎರಡು ಸಿನಿಮಾಗಳು ತೆರೆಕಂಡವು: 'ಒಂದು ಸರಳ ಪ್ರೇಮಕಥೆ' ಹಾಗೂ 'ಪೆಪೆ.' ಸಿಂಪಲ್ ಸುನಿ ನಿರ್ದೇಶನದ 'ಒಂದು ಸರಳ ಪ್ರೇಮಕಥೆ' ಶೀರ್ಷಿಕೆಗೆ ತಕ್ಕಂತೆ ಪ್ರೇಮದ ಸೌಂದರ್ಯವನ್ನು ಎತ್ತಿಹಿಡಿಯುವ ಸರಳತೆಯನ್ನೇ ಗುಣವಾಗುಳ್ಳ ಸಿನಿಮಾ. ಚಿತ್ರದುದ್ದಕ್ಕೂ ಅನುರಣಿಸುವ 'ಮೂಕನಾಗಬೇಕು ಜಗದೊಳು ಜ್ವಾಕ್ಯಾಗಿರಬೇಕು' ತತ್ತ್ವಪದ ಸಿನಿಮಾಕ್ಕೆ ಸಂಗೀತಸ್ಪರ್ಶವನ್ನೂ ತಾತ್ವಿಕ ಸೌಂದರ್ಯವನ್ನೂ ನೀಡಿದೆ. ನೀಲೇಶ್ ಎಸ್. ನಾಯರ್ ನಿರ್ದೇಶನದ 'ಪೆಪೆ' ಗ್ರಾಮೀಣ ಹಂದರದಲ್ಲಿ ಜಾತಿ ಸಮಸ್ಯೆಯ ಬಗ್ಗೆ ಗಮನಸೆಳೆಯುವ ಪ್ರಯತ್ನವಾಗಿದೆ. ಮಹಿಳಾದನಿಯೊಂದು 'ಪೆಪೆ'ಯಲ್ಲಿ ಅಂತರ್ಗತವಾಗಿದೆ. ತಾಂತ್ರಿಕವಾಗಿ ಕೂಡ ನೀಲೇಶ್‌ರದು ಗಮನಾರ್ಹ ಸಿನಿಮಾ. 'ಒಂದು ಸರಳ ಪ್ರೇಮಕಥೆ', 'ಪೆಪೆ' – ಈ ಎರಡೂ ಸಿನಿಮಾಗಳಲ್ಲಿನ ವಿನಯ್ ರಾಜ್‌ಕುಮಾರ್ ಅವರ ನಟನೆ ಸಿದ್ಧಸೂತ್ರಗಳಿಗೆ ಒಗ್ಗದ ವ್ಯಕ್ತಿತ್ವದ ಕಲಾತ್ಮಕ ಹುಡುಕಾಟದಂತಿದೆ.

ದುನಿಯಾ ವಿಜಯ್ ನಟನೆ–ನಿರ್ದೇಶನದ 'ಭೀಮ' 2024ರ ಯಶಸ್ವೀ ಚಿತ್ರಗಳಲ್ಲೊಂದು.



ಪ್ರೇಕ್ಷಕರ ಮೆಚ್ಚುಗೆ ಪಡೆಯದ ರಾಜ್ ಬಿ. ಶೆಟ್ಟಿ 'ರೂಪಾಂತರ'



ದುನಿಯಾ ವಿಜಯ್: ಭಲೇ ಭೀಮ!



'ಕೋಟಿ'ಯಲ್ಲಿ ಧನಂಜಯ್, ಮೋಕ್ಷಾ ಕುಶಾಲ್

### ಜೀವನವೇ ಸಿನಿಮಾ ಆದಾಗ...

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗ ಕಂಡ ತಾರಾ ವರ್ಚಸ್ಸಿನ ನಟರಲ್ಲಿ ದರ್ಶನ್ ಮುಖ್ಯರಾದವರು. ಅವರ ಸಿನಿಮಾಗಳು ನಿರ್ಮಾಪಕರ ಪಾಲಿಗೆ ಅಕ್ಷಯಪಾತ್ರೆಯಂಥವು. ಆದರೆ, ದರ್ಶನ್ ಇತ್ತೀಚಿನ ದಿನಗಳಲ್ಲಿ ಸುದ್ದಿಯಲ್ಲಿರುವುದು ಸಿನಿಮೇತರ ಕಾರಣಗಳಿಂದಾಗಿ. ಕೊಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ದರ್ಶನ್, ಅನಾರೋಗ್ಯದ ಸಮಸ್ಯೆಯನ್ನೂ ಎದುರಿಸುತ್ತಿದ್ದಾರೆ. ದರ್ಶನ್‌ರ ವೈಯಕ್ತಿಕ ಬಿಕ್ಕಟ್ಟು ನಿರ್ಮಾಪಕರನ್ನೂ ಬಾಧಿಸತೊಡಗಿದೆ.

ತೆರೆಯ ಮೇಲೆ ಜನರನ್ನು ರಂಜಿಸುವ ಹಾಗೂ ಅಭಿಮಾನಿಗಳನ್ನು ಪ್ರಭಾವಿಸುವ ನಾಯಕ ನಟನೊಬ್ಬ ನಿಜ ಜೀವನದಲ್ಲಿ ಶಿಸ್ತು ಹಾಗೂ ನೈತಿಕತೆ ಉಳಿಸಿಕೊಳ್ಳುವುದು ಏಕೆ ಮುಖ್ಯ ಎನ್ನುವುದಕ್ಕೆ ದರ್ಶನ್ ಪ್ರಕರಣ ಉದಾಹರಣೆಯಂತಿದೆ. ದರ್ಶನ್‌ರ ಕಾನೂನು ಹೋರಾಟದ ಫಲಾಫಲಗಳು 2025ರಲ್ಲೂ ಕನ್ನಡ ಚಿತ್ರರಂಗದ ಮೇಲೆ ಪ್ರಭಾವ ಬೀರಲಿವೆ.

ರಾಜ್‌ಕುಮಾರ್ ನಂತರ ಕನ್ನಡ ಚಿತ್ರರಂಗಕ್ಕೆ ಸಮರ್ಥ ನಾಯಕತ್ವವೇ ದೊರೆತಿಲ್ಲ. ಕೆಲ ಕಾಲ ಅಂಬರೀಷ್ ಚಿತ್ರರಂಗವನ್ನು ಒಗ್ಗೂಡಿಸುವ ಕೆಲಸ ಮಾಡಿದರಾದರೂ, ಅವರು ರಾಜಕಾರಣ–ಸಿನಿಮಾದ ನಡುವೆ ಹಂಚಿಹೋಗಿದ್ದರು. ಅಂಬರೀಷ್ ನಿರ್ಗಮನದ ನಂತರ ಚಿತ್ರೋದ್ಯಮದ ಒಕ್ಕೊರಲಿನ ರೂಪದ ಧ್ವನಿಯೊಂದನ್ನು ಕಂಡುಕೊಳ್ಳುವುದು ಚಿತ್ರರಂಗಕ್ಕೆ ಸಾಧ್ಯವಾಗಿಲ್ಲ. ನಾಯಕತ್ವದ ಈ ಕೊರತೆಯೂ ಚಿತ್ರೋದ್ಯಮದ ಬಿಕ್ಕಟ್ಟುಗಳು ಉಲ್ಬಣಗೊಳ್ಳಲು ಕಾರಣವಾಗಿದೆ.



ಪ್ರಯೋಗಶೀಲ ವಿನಯ್ ರಾಜ್‌ಕುಮಾರ್